ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–1**

ಸಂಖ್ಯೆ:ಹೆಚ್.ಆರ್.ಎಂ.ಎಸ್/ಎನ್.ಪಿ.ಎಸ್/ಬ್ಯಾಕ್‌ಲಾಗ್/02/20–21 ದಿನಾಂಕ:26/11/2020

**ಸುತ್ತೋಲೆ** [ಅತಿ ತುರ್ತು]

**ವಿಷಯ:** ಎನ್.ಪಿ.ಎಸ್‌ಗೆ ಒಳಪಟ್ಟ ನೌಕರರ ಬ್ಯಾಕ್‌ಲಾಗ್ ಪಾವತಿಗಾಗಿ ಇಲ್ಲಿಯವರೆವಿಗೂ ಷೆಡ್ಯೂಲ್ IV ಮತ್ತು V ಗಳನ್ನು ಸಲ್ಲಿಸದೇ ಇರುವ ಬಗ್ಗೆ.

**ಉಲ್ಲೇಖ:** 1. ಮಾನ್ಯ ಖಜಾನೆ ಆಯುಕ್ತರು, ಬೆಂಗಳೂರು ರವರ ಅರೆ ಸರ್ಕಾರಿ ಪತ್ರ ಸಂಖ್ಯೆ: DOT/NPS0GBC(BKL)/2/2020 ದಿನಾಂಕ:13/10/2020.
2. ಮಾನ್ಯ ಖಜಾನೆ ಆಯುಕ್ತರ ನಡೆಸಿದ ಸಭೆ ದಿನಾಂಕ:26.11.2020.
3. ಈ ಕಛೇರಿ ಸುತ್ತೋಲೆ ಪತ್ರ ಸಂಖ್ಯೆ:ಹೆಚ್.ಅರ್.ಎಂ.ಎಸ್/ಸುತ್ತೋಲೆ/1/2020–21 ದಿನಾಂಕ:23.11.2020

*********

ಎನ್.ಪಿ.ಎಸ್ ಬ್ಯಾಕ್‌ಲಾಗ್ ಮೊತ್ತವನ್ನು ಪಾವತಿಸುವ ಸಂಬಂಧ ಉಲ್ಲೇಖ(3)ರಲ್ಲಿ ಈಗಾಗಲೇ ಸುತ್ತೋಲೆ ಹೊರಡಿಸಲಾಗಿದ್ದು, ಎನ್.ಪಿ.ಎಸ್ ಬ್ಯಾಕ್‌ಲಾಗ್ ಮೊತ್ತವನ್ನು ಹೆಚ್.ಅರ್.ಎಂ.ಎಸ್ ತಂತ್ರಾಂಶದಲ್ಲಿ ಜನರೇಟ್ ಮಾಡಿ K-2 ಮುಖಾಂತರ ಮಾಹಿತಿಯನ್ನು submit ಮಾಡಬೇಕಿದೆ. ಆದ್ದರಿಂದ ಸಾರ್ವಜನಿಕ ಶಿಕ್ಷಣ ಇಲಾಖೆಯ 10059 ನೌಕರರ ಜಿಲ್ಲಾವಾರು ಪಟ್ಟಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸುತ್ತಾ, ದಿನಾಂಕ:05.12.2020ರೊಳಗಾಗಿ ಷೆಡ್ಯೂಲ್ IV ಮತ್ತು V ಅನ್ನು ಜನರೇಟ್ ಮಾಡಿ K-2 ಮುಖಾಂತರ submit ಮಾಡಿದ ನಂತರ Hard copy ಗಳನ್ನು ಸಂಬಂಧಿಸಿದ ಡಿಡಿಓಗಳು ತಮ್ಮ ಜಿಲ್ಲಾ ವ್ಯಾಪ್ತಿಯ ಸಹಾಯಕ ನಿರ್ದೇಶಕರು, ಸಣ್ಣ ಉಳಿತಾಯ ಖಾತೆ ಇಲಾಖೆ ಇವರಿಗೆ ಸಲ್ಲಿಸಿ ಸ್ವೀಕೃತಿಯನ್ನು ಖಡ್ಡಾಯವಾಗಿ ಪಡೆಯುವುದು ಹಾಗೂ ಯಥಾ ಪ್ರತಿಯನ್ನು ಈ–ಮೇಲ್ ಮುಖಾಂತರ ಹೆಚ್.ಆರ್.ಎಂ.ಎಸ್ ಶಾಖೆಗೆ ಕಳುಹಿಸುವುದು. ಮುಂದಿನ ದಿನಗಳಲ್ಲಿ ಹೆಚ್.ಅರ್.ಎಂ.ಎಸ್ ಮುಖಾಂತರ ಬ್ಯಾಕ್‌ಲಾಗ್ ಮೊತ್ತವನ್ನು ಪಾವತಿಸಲು ಹಾಗೂ ಷೆಡ್ಯೂಲ್ IV ಮತ್ತು V ಗಳನ್ನು submit ಮಾಡಲು ಅವಕಾಶವಿರುವುದಿಲ್ಲ. ಈ ಸಂಬಂಧ ಮುಂದೆ ಯಾವುದೇ ನ್ಯಾಯಾಲಯ ಪ್ರಕರಣಗಳು ಉದ್ಭವಿಸಿದಲ್ಲಿ ಸಂಬಂಧಿಸಿದ ಡಿಡಿಓಗಳೇ ಪೂರ್ಣ ಹೊಣೆಗಾರರಾಗಿರುತ್ತಾರೆ ಎಂದು ಈ ಮೂಲಕ ತಿಳಿಸಿದೆ.

ಆದ ಕಾರಣ ಹೆಚ್.ಆರ್.ಎಂ.ಎಸ್ ತಂತ್ರಾಂಶದ ಮೂಲಕ ಜನರೇಟ್ ಮಾಡಲಾದ ಎಲ್ಲಾ ಷೆಡ್ಯೂಲ್ IV ಮತ್ತು V ಗಳನ್ನು ದಿನಾಂಕ:05.12.2020ರೊಳಗಾಗಿ ತಪ್ಪದೇ ಸಲ್ಲಿಸಲು ತಿಳಿಸಿದೆ. ತದನಂತರ ಸಲ್ಲಿಸುವ ಷೆಡ್ಯೂಲ್ IV ಮತ್ತು V ಗಳನ್ನು ಪಾವತಿಗಾಗಿ ಸ್ವೀಕರಿಸಲಾಗುವುದಿಲ್ಲ. ಸದರಿ ಷೆಡ್ಯೂಲ್‌ಗಳನ್ನು ಜನರೇಟ್ ಮಾಡುವಾಗ ಯಾವುದಾದರೂ Technical issue (ತಾಂತ್ರಿಕ ತೊಂದರೆ) ಕಂಡು ಬಂದಲ್ಲಿ ಈ ಬಗ್ಗೆ error screenshot ಸಮೇತ ಈ ಕೆಳಕಂಡ ಮೇಲ್ ಐಡಿಗಳಿಗೆ ಈಮೇಲ್ ಮಾಡಬಹುದಾಗಿದೆ ಹಾಗೂ ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ.

nps-cell@karnataka.gov.in, ato.nps@karnataka.gov.in
080-22866405, 080-22864108

**[ವಿ.ಸೂ: 1) ಈ ಕುರಿತು ಉಪನಿರ್ದೇಶಕರು(ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಷೆಡ್ಯೂಲ್ IV ಮತ್ತು V ಗಳನ್ನು ಸಲ್ಲಿಸದಿರುವ ಎಲ್ಲಾ ಡಿಡಿಓಗಳ ಸಭೆ ಕರೆದು ದಿನಾಂಕ:05.12.2020ರೊಳಗೆ ಶೇ:100% ರಷ್ಟು ಎನ್.ಪಿ.ಎಸ್ ಬ್ಯಾಕ್‌ಲಾಗ್ ಮೊತ್ತವನ್ನು ಹೆಚ್.ಆರ್.ಎಂ.ಎಸ್ ಮೂಲಕ ಪಾವತಿಸಲು ಹಾಗೂ ಷೆಡ್ಯೂಲ್ IV ಮತ್ತು V ಗಳನ್ನು submit ಮಾಡಲು ಅಗತ್ಯ ಕ್ರಮವಹಿಸಲು ತಿಳಿಸಿದೆ. ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಸಂಬಂಧಿಸಿದ ನೌಕರರಿಗೆ ಸರ್ಕಾರದಿಂದ ಪಾವತಿಸಲಾಗುವ ವಂತಿಗೆ ಮೊತ್ತವು ದೊರೆಯುವುದಿಲ್ಲ ಎಂದು ಸ್ಪಷ್ಟಪಡಿಸಿದೆ.**

**2) ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ಕಛೇರಿಯಲ್ಲಿ ಎನ್‌ಪಿಎಸ್‌ಗೆ ಒಳಪಟ್ಟ ನೌಕರರ ಬ್ಯಾಕ್‌ಲಾಗ್ ಪಾವತಿಗಾಗಿ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಿ ಪ್ರತಿದಿನ ಜಿಲ್ಲಾ ಹಾಗೂ ಬ್ಲಾಕ್ ಹಂತದಲ್ಲಿ ಮೇಲ್ವಿಚಾರಣೆ ಮಾಡಿ ಶೇ.100%ರಷ್ಟು ಗುರಿ ಸಾಧಿಸುವುದು. ಸದರಿ ನೋಡಲ್ ಅಧಿಕಾರಿಗಳ ಪಟ್ಟಿಯನ್ನುಈ ಕಛೇರಿಯ ಹೆಚ್.ಆರ್.ಎಂ.ಎಸ್ ಶಾಖೆಗೆ ಇಂದೇ ಕಳುಹಿಸುವುದು]**

[ಅಡಕ-ಜಿಲ್ಲಾವಾರು ಹಾಗೂ ಡಿಡಿಓವಾರು
ಎನ್.ಪಿ.ಎಸ್ ಬಾಕಿ ಪ್ರಕರಣಗಳ ಪಟ್ಟಿ]

ವಿ.ಅನ್ಬುಕುಮಾರ್., ಭಾ.ಆ.ಸೇ
ಆಯುಕ್ತರು

ಮಾಹಿತಿಗಾಗಿ:

1. ಮಾನ್ಯ ಖಜಾನೆ ಆಯುಕ್ತರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ:ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು ರವರಿಗೆ ವಂದನೆಗಳೊಂದಿಗೆ ಸಲ್ಲಿಸಿದೆ.
2. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ವಿಭಾಗ ರವರು ತುರ್ತು ಕ್ರಮಕೈಗೊಳ್ಳಲು ಕೋರಿದೆ.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ವಿಭಾಗ ರವರು ತುರ್ತು ಕ್ರಮಕೈಗೊಳ್ಳಲು ಕೋರಿದೆ.

ಗೆ:

1. ನಿರ್ದೇಶಕರು, ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಮುಂದಿನ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಮುಂದಿನ ಕ್ರಮಕ್ಕಾಗಿ.
3. ಸಹಾಯಕ ನಿರ್ದೇಶಕರು (ಕೇಂದ್ರ ಸ್ಥಾನ), ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಅಗತ್ಯ ಮುಂದಿನ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ (ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರ ಮುಖಾಂತರ) ಅಗತ್ಯ ಮುಂದಿನ ಕ್ರಮಕ್ಕಾಗಿ.
5. ರಾಜ್ಯದ ಎಲ್ಲಾ ಮುಖ್ಯೋಪಾಧ್ಯಾಯರು, ಸರ್ಕಾರಿ ಪ್ರೌಢ ಶಾಲೆ ರವರಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ) ಅಗತ್ಯ ಮುಂದಿನ ಕ್ರಮಕ್ಕಾಗಿ.